ಒಬ್ಬ ಸ್ಟೆನೋವನ್ನು ಕಾಣಬೇಕು ಎಂದೆ. ಅದಕ್ಕೇನಂತೆ ಈಗಲೇ ಕಳುಹಿಸುತ್ತೇನೆ ಎಂದ. ಹೇಳಿದಂತೆ ಮಧ್ಯ ಪ್ರಾಯದ ಒಬ್ಬಾಕೆ ಬಂದರು. 'ಏನಿಲ್ಲ, ಈ ಕರವಸ್ತ್ರದಲ್ಲಿ ಬರೆದಿರುವ ಸಂಕೇತಗಳನ್ನು ಭೇದಿಸಲಾಗುವುದೇ?' ಎಂದು ಕರವಸ್ತ್ರ ತೋರಿಸಿದೆ. 'ಮೇಲ್ನೋಟಕ್ಕೆ ಇದು ಶಾರ್ಟ್ ಹ್ಯಾಂಡ್‌ನ ಸಂಕೇತಾಕ್ಷರಗಳು ಅನ್ನಿಸುತ್ತೆ. ಟ್ರೈ ಮಾಡ್ತೀನಿ' ಎಂದರು. ನಿಮ್ಮ ಲಿಪ್ಯಂತರವನ್ನು ಈ ಹಾಳೆಯಲ್ಲಿ ಬರೆದುಕೊಳ್ಳಿ ಎಂದು ಬಿಳಿಯ ಹಾಳೆಯನ್ನು ಕೊಟ್ಟೆ. ಮೊದಮೊದಲು ಸ್ವಲ್ಪ ನಿಧಾನಿಸಿದರೂ ನಂತರ ಸಾಧಾರಣವಾದ ವೇಗದಲ್ಲಿ ಸಣ್ಣ ಸಣ್ಣ ವಾಕ್ಯಗಳು, ಪದಗುಚ್ಛಗಳು ಹಾಳೆಯನ್ನು ತುಂಬತೊಡಗಿದವು. 'ಸರ್, ಐ ಹಾವ್ ಟ್ರೈಡ್ ಮೈ ಬೆಸ್ಟ್, ಇನ್ನೊಬ್ಬರ ಲಿಪಿ ನಮಗೆ ಓದಲು ಕಷ್ಟ' ಎಂದಾಗ ಆಕೆಗೆ ಧನ್ಯವಾದಗಳನ್ನು ಹೇಳಿ ಕಳುಹಿಸಿ, ಆತುರಾತುರವಾಗಿ ಓದಿದೆ. ಬಿಳಿ ಹಾಳೆಯಲ್ಲಿ ಕಂಡದ್ದು ಸಂಕ್ಷಿಪ್ತ ರೂಪದಲ್ಲಿದ್ದ ಅಂದಿನ ಪತ್ರಿಕೆಯ ವಿಷಯ. ಕೂಡಲೇ ಅಂದಿನ ಪ್ರಶ್ನೆ ಪತ್ರಿಕೆಯನ್ನು ತೆರೆದೆ. ಐದರಿಂದ ಆರು ಪ್ರಶ್ನೆಗಳಿಗೆ ಉತ್ತರ ಲಿಪ್ಯಂತರದಲ್ಲಿ ಸಿಕ್ಕಿದೆ. ನಕಲು ಮಾಡಿರುವುದು ಕರಕಮಲೇಶ್, ಇನ್ನು ಅವನನ್ನು ಕರೆಸಿ ಕೂಡಲೇ ವಿಚಾರಿಸಬೇಕು ಅನ್ನಿಸಿ, ಖುದ್ದು ನಾನೇ ಅವನ ಕೊಠಡಿಗೆ ಹೋದೆ. ಆಗಷ್ಟೇ ಅವನು ಉತ್ತರಪತ್ರಿಕೆಯನ್ನು ಕೊಠಡಿಯ ಮೇಲ್ವಿಚಾರಕರಿಗೆ ಕೊಡುತ್ತಿದ್ದ. ಅವನನ್ನು ಅವನ ಉತ್ತರ ಪತ್ರಿಕೆ ಸಮೇತ ನನ್ನ ಕೊಠಡಿಗೆ ಕರೆತಂದು, ನನ್ನೆದುರಿಗೆ ಕೂರಲು ಹೇಳಿ ಲಿಪ್ಯಂತರದ ಪೇಪರ್ ತೋರಿಸಿದೆ. ಸಣ್ಣಗೆ ಬೆವರಿದ. 'ಕರವಸ್ತ್ರ ಕೊಡಲೇ?' ಎಂದೆ. ತಗ್ಗಿಸಿದ ತಲೆ ಮೇಲೆತ್ತದೆ, 'ಹಲ್ಕಾ ಕೆಲಸ ಮಾಡಿಬಿಟ್ಟೆ ಸರ್, ನಿಯಮಗಳ ಪ್ರಕಾರ ಇದು ನನಗಿದ್ದ ಕಟ್ಟ ಕಡೆಯ ಅವಕಾಶ, ದಯವಿಟ್ಟು ಇದನ್ನು ಇಲ್ಲೇ ಬಿಟ್ಟುಬಿಡಿ, ನಿಮ್ಮ ದಮ್ಮಯ್ಯ' ಎಂದು ಗೋಳಾಡಿದ. ಅಷ್ಟೇ ಅಲ್ಲದೆ ಮರುಮಾತಾಡದೆ ತಪ್ಪೊಪ್ಪಿಗೆ ಬರೆದು ಕೊಟ್ಟು ಹೋದವ, ಮರುದಿನ ಪರೀಕ್ಷೆಗೆ ಗೈರು. ತನಗೆ ತಾನೇ ಶಿಕ್ಷೆ ಕೊಟ್ಟುಕೊಂಡಿದ್ದ.

★★★

ಎಂದಿನಂತೆ ಕೆಲಸಕ್ಕೆ ಹಾಜರಾಗುತ್ತಲೇ ನನ್ನ ಪಿ.ಎ. 'ಅಭಿನಂದನೆಗಳು ಸರ್' ಎಂದು ಕೈ ಕುಲುಕಿದ.

'ನೀವಾ?' ಅಚ್ಚರಿಯಾಗಿತ್ತು.

'ಹೌದು ಸರ್, ಮಾಹಿತಿ ಕೊಟ್ಟದ್ದು ನಾನೇ. ಕೊನೆಯ ಗಳಿಗೆಯಲ್ಲಿ ಕೆಲವು ಅಭ್ಯರ್ಥಿಗಳಿಗೆ ಇವನ ಕುಟಿಲತೆಯ ಬಗ್ಗೆ ಸಂಶಯ ಬಂದು ನನ್ನಲ್ಲಿ ಹೇಳಿಕೊಂಡರು. ನನ್ನ ಕೈಲಾದ ಸಹಾಯ ಮಾಡಿದೆ ಸರ್.'

'ಒಂದು ವೇಳೆ ನನಗೆ ಕಂಡುಹಿಡಿಯಲಾಗದಿದ್ದಲ್ಲಿ ಅನ್ಯಾಯವಾಗ್ತಿರಲಿಲ್ವೆ.'

'ಹಾಗಾಗಿದ್ದಲ್ಲಿ ಮೂರನೆಯ ದಿನದ ಪರೀಕ್ಷೆಗೆ ನಾನೇ ಒಗಟು ಬಿಡಿಸಿರುತ್ತಿದ್ದೆ, ಆದರೆ ನಿಮ್ಮ ಮೇಲೆ ಭರವಸೆಯಿತ್ತು ಸರ್. ಸದ್ಯ ಪ್ರಾಮಾಣಿಕರಿಗೆ ಅನ್ಯಾಯವಾಗಲಿಲ್ಲ' ಮೊಗವರಳಿಸಿದ.

ನಾನೂ ಗೆಲುವಿನ ನಗೆ ನಕ್ಕೆ.

**ಕೆ.ವಿ. ರಾಜಲಕ್ಷ್ಮಿ**

ಎಂ.ಕಾಂ., ಎಲ್.ಎಲ್.ಬಿ. ಪದವೀಧರೆ. ದೂರ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.